# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 97

ಸದಸ್ಯರ ಹೆಸರು : ಶ್ರೀ ಕೆ.ಹರೀಶ್ ಕುಮಾರ್

ಉತ್ತರಿಸುವ ಸಚಿವರು : ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು

ಉತ್ತರಿಸುವ ದಿನಾಂಕ : 05-07-2023

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ. | ರಾಜ್ಯದಲ್ಲಿರುವ ಬಸ್ ನಿಲ್ದಾಣಗಳಲ್ಲಿ ವ್ಯಾಪಾರಿ ಮಳಿಗೆಗಳು ಸೇರಿದಂತೆ ಬಹುಮಹಡಿ ಕಟ್ಟಡಗಳನ್ನು ನಿರ್ಮಿಸಿ ಬಾಡಿಗೆಗೆ ನೀಡದೆ ವ್ಯರ್ಥವಾಗಿ ಬಿಟ್ಟಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಸರ್ಕಾರದ ಗಮನಕ್ಕೆ ಬಂದಿದೆ. |
| ಆ. | ಬಂದಿದ್ದಲ್ಲಿ, ಈ ಕುರಿತು ಸರ್ಕಾರ ಕೈಗೊಂಡಿರುವ ಕ್ರಮಗಳೇನು? (ವಿವರ ನೀಡುವುದು) | **ಕ.ರಾ.ರ.ಸಾ.ನಿಗಮ:**<br>ನಿಗಮದಲ್ಲಿರುವ 1640 ವಾಣಿಜ್ಯ ಮಳಿಗೆಗಳಲ್ಲಿ, 1280 ವಾಣಿಜ್ಯ ಮಳಿಗೆಗಳು ಪರವಾನಗಿದಾರರ ನಿರ್ವಹಣೆಯಲ್ಲಿದ್ದು, ಅವುಗಳಲ್ಲಿ 360 ವಾಣಿಜ್ಯ ಮಳಿಗೆಗಳು ಖಾಲಿಯಿರುತ್ತವೆ.<br><br>**ಬೆಂ.ಮ.ಸಾ.ಸಂಸ್ಥೆ:**<br>ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯಲ್ಲಿ ಒಟ್ಟು 363 ವಾಣಿಜ್ಯ ಮಳಿಗೆಗಳಿದ್ದು, ಅವುಗಳಲ್ಲಿ ಪ್ರಸ್ತುತ 105 ವಾಣಿಜ್ಯ ಮಳಿಗೆಗಳು ಖಾಲಿಯಿದ್ದು, ಟೆಂಡರ್ ಕರೆಯಲಾಗಿರುತ್ತದೆ.<br><br>**ಕ.ಕ.ರ.ಸಾ.ನಿಗಮ:**<br><br>ಕ.ಕ.ರ.ಸಾ.ನಿಗಮದ ವ್ಯಾಪ್ತಿಯಲ್ಲಿರುವ ಒಟ್ಟು 988 ವಾಣಿಜ್ಯ ಮಳಿಗೆಗಳಲ್ಲಿ 766 ವಾಣಿಜ್ಯ ಮಳಿಗೆಗಳು ಚಾಲ್ತಿಯಲ್ಲಿದ್ದು, 222 ಮಳಿಗೆಗಳು ಖಾಲಿ ಇರುತ್ತವೆ.<br>ಸಂಸ್ಥೆಯ ವ್ಯಾಪ್ತಿಯಲ್ಲಿ ಪ್ರಸ್ತುತ ಖಾಲಿ ಇರುವ ವಿವಿಧ ಸಾಮಾನ್ಯ ಮಳಿಗೆಗಳು, ವಾಣಿಜ್ಯ/ಕಛೇರಿ ಕ್ಷೇತ್ರಗಳಿಗೆ ಪಾರದರ್ಶಕವಾಗಿ ಕರ್ನಾಟಕ ಸರ್ಕಾರದಿಂದ ಇ-ಪ್ರಕ್ಯೂರ್ಮೆಂಟ್ (ಸಾರ್ವಜನಿಕ ವಿದ್ಯುನ್ಮಾನ ವೇದಿಕೆ) ಪೋರ್ಟಲ್ ಮುಖಾಂತರ ಮಾಸಿಕ ಪರವಾನಗಿ ಶುಲ್ಕದ ಆಧಾರದ ಮೇಲೆ ಪರವಾನಗಿದಾರರನ್ನು ಆಯ್ಕೆ ಮಾಡಲು ಕ್ರಮವಹಿಸಲಾಗುತ್ತಿದೆ.<br><br>ಮುಂದುವರೆದು ಖಾಲಿ ಇರುವ ವಾಣಿಜ್ಯ ಮಳಿಗೆ/ಕಟ್ಟಡಗಳನ್ನು ಬಾಡಿಗೆಗೆ(ಪರವಾನಗಿ) ನೀಡಲು ಕೆಳಕಂಡಂತೆ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.<br><br>1) ಖಾಲಿ ಇರುವ ಮಳಿಗೆಗಳನ್ನು ಬಾಡಿಗೆ(ಪರವಾನಗಿ) ನೀಡಲು ಇ-ಸಂಗ್ರಹಣಾ ಕೋಶದ ಮೂಲಕ ಟೆಂಡರ್/ ಸಂಧಾನ ಹೊರಡಿಸಿ ಪರವಾನಗಿದಾರರ ಆಯ್ಕೆಗೆ ಕ್ರಮ |

ಕೈಗೊಳ್ಳಲಾಗುತ್ತಿದೆ.

2) ಟೆಂಡರ್ ಕರೆದಿರುವ ವಿವರಗಳನ್ನು ಸಾರ್ವಜನಿಕರ ಮಾಹಿತಿಗಾಗಿ ರಾಜ್ಯ ಹಾಗೂ ಸ್ಥಳೀಯ ಮಟ್ಟದ ಕನ್ನಡ ಹಾಗೂ ಇಂಗ್ಲೀಷ್ ದಿನಪತ್ರಿಕೆಗಳಲ್ಲಿ ಜಾಹಿರಾತು ಪ್ರಕಟಿಸಲಾಗುತ್ತಿದೆ.

3) ಟೆಂಡರ್/ಸಂಧಾನದ ಪ್ರಕಟಣೆಗಳನ್ನು ಸಂಸ್ಥೆಯ ವೆಬ್ ಸೈಟ್ ನಲ್ಲಿ ಪ್ರಕಟಿಸಲಾಗುತ್ತಿದೆ.

4) ಟೆಂಡರ್/ಸಂಧಾನದ ಪ್ರಕಟಣೆಗಳನ್ನು ಟಿ.ಟಿ.ಎಂ.ಸಿ ಬಸ್ ನಿಲ್ದಾಣಗಳ ನೋಟೀಸ್ ಬೋರ್ಡ್‌ಗಳಲ್ಲಿ ಸಾರ್ವಜನಿಕರ ಮಾಹಿತಿಗಾಗಿ ಪ್ರದರ್ಶಿಸಲಾಗುತ್ತಿದೆ.

ವಿವಿಧ ಬಸ್ ನಿಲ್ದಾಣ/ಟಿ.ಟಿ.ಎಂ.ಸಿ ಗಳಲ್ಲಿನ ಖಾಲಿ ಇರುವ ಕಛೇರಿ ಸ್ಥಳಗಳಲ್ಲಿ ಸರ್ಕಾರಿ ಇಲಾಖೆಗಳು ಪಡೆಯುವಂತೆ ವಿವಿಧ ಸರ್ಕಾರಿ ಇಲಾಖೆಯವರೊಂದಿಗೆ ಪತ್ರ ವ್ಯವಹರಿಸಲಾಗುತ್ತಿದೆ.

**ವಾ.ಕ.ರ.ಸಾ.ಸಂಸ್ಥೆ:**

ಸಾರ್ವಜನಿಕ ಪ್ರಯಾಣಿಕರಿಗೆ ಮೂಲಭೂತ ಸೌಲಭ್ಯ ಕಲ್ಪಿಸುವ ಉದ್ದೇಶದಿಂದ ಬಸ್ ನಿಲ್ದಾಣಗಳಲ್ಲಿನ ವಾಣಿಜ್ಯ ಮಳಿಗೆ ಹಾಗೂ ಬಹುಮಹಡಿ ಕಟ್ಟಡಗಳನ್ನು ನಿಯಮಾವಳಿಗಳನ್ವಯ ಟೆಂಡರ್ ಸಂಧಾನಗಳ ಮೂಲಕ ಯಶಸ್ವಿ ಬಿಡ್‌ದಾರರಿಗೆ ಹಂಚಿಕೆ ಮಾಡಲಾಗಿರುತ್ತದೆ. ಪ್ರಸ್ತುತ ಸಂಸ್ಥೆಯ ವ್ಯಾಪ್ತಿಯಲ್ಲಿ ಯಾವುದೇ ಬಹುಮಹಡಿ ಕಟ್ಟಡಗಳು ಖಾಲಿ ಇರುವುದಿಲ್ಲ.

ಸಂಖ್ಯೆ: ಟಿಡಿ 81 ಟಿಸಿಕ್ಯೂ 2023

(ರಾಮಲಿಂಗಾರೆಡ್ಡಿ)
ಸಾರಿಗೆ ಮತ್ತು ಮುಜರಾಯಿ ಸಚಿವರು